**ಸಾಕ್ಷಿಯನ್ನು ದಿಃ _27/02/2026_ ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
***ಪಾಟೀ ಸವಾಲು : ಶ್ರೀ ಆರಹೆಚ್ ವಕೀಲರಿಂದ ವಾದಿ ಪರವಾಗಿ.***

ನಾನು ಬಿ.ಕಾಂ ಪದವಿಧರ. ಸದರಿ ದಾವೆ ಯಾರು ಯಾರ ವಿರುದ್ದ ಯಾವ ಕಾರಣಕ್ಕೆ ಹೂಡಿದ್ದಾರೆ ಎಂದು ಗೊತ್ತಿದೆ. ನನ್ನ ಪ್ರತಿವಾದ ಪತ್ರದ ವಿಷಯ ಸಂಗತಿ ಗೊತ್ತಿದೆ. ಸದರಿ ದಾವೆಯ ದಾವಾದಾಸ್ತಿ ಎಂದರೆ ರಾಮಾಪೂರದ ಆರ್.ಎಸ್.ನಂ. 132/1 ಇರುತ್ತದೆ. ಸದರಿ ಆಸ್ತಿಗೆ ಮತ್ತು ನಿಮಗೆ ಏನೂ ಸಂಬಂಧವಿದೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಸದರಿ ದಾವಾದಾಸ್ತಿಯನ್ನು ನಾನು ದಿಃ25-04-1992 ರಲ್ಲಿ ಖರೀದಿ ಮಾಡಿರುತ್ತೇನೆ. ಸದರಿ ಆಸ್ತಿಯನ್ನು ನಾನು ಭರಮಪ್ಪ ನಾಶಿಪುಡಿ ಎನ್ನುವವರಿಂದ ಖರೀದಿ ಮಾಡಿರುತ್ತೇನೆ. ಖರೀದಿ ಸಮಯದಲ್ಲಿ ಸದರಿ ಜಮೀನಿನ ಸರ್ವೇ ನಂಬರ 132/1 ಎಂದು ಇತ್ತು. ಸದರಿ ಜಮೀನಿನ ಒಟ್ಟು ಕ್ಷೇತ್ರ ಖರೀದಿ ಮಾಡುವ ಸಮಯದಲ್ಲಿ 8 ಎಕರೆ 25 ಗುಂಟೆ ಇತ್ತು. ಸದರಿ ದಾವೆಯು ಸದರಿ ಜಮೀನಿನ 4 ಎಕರೆ 15 ಗುಂಟೆಗೆ ಮಾತ್ರ ಹೂಡಿದ್ದು ಎಂದು ನನಗೆ ಗೊತ್ತು. ಈ ರೀತಿ ಸದರಿ 4 ಎಕರೆ 15 ಗುಂಟೆ ಜಮೀನಿನನ್ನು ಪ್ರತಿವಾದಿ ನಂ.1 ಇವರಿಗೆ ನಾನು ಮಾರಾಟ ಮಾಡಿದ್ದು ತಪ್ಪು ಇದೆ ಎಂದು ಪ್ರಶ್ನಿಸಿ ದಾವೆ ಹೂಡಿರುತ್ತಾರೆ ಎನ್ನುವ ವಿಷಯ ಸಂಗತಿ ನನಗೆ ಗೊತ್ತು. ಈ ರೀತಿ ಪ್ರತಿವಾದಿ ನಂ.1 ಖರೀದಿ ಕೊಡುವ ಸಮಯದಲ್ಲಿ ನನಗೆ ಸದರಿ ಜಮೀನಿನಲ್ಲಿ 4 ಎಕರೆ 15 ಗುಂಟೆ ಮಾಲೀಕತ್ವ ಮಾತ್ರ ಇತ್ತು ಎಂದರೆ ನಿಜ. ಉಳಿದ 4 ಎಕರೆ 10 ಗುಂಟೆ ನಾನು ಹೇಮಂತ ಶ್ರೀನಿವಾಸ ಇನಾಮದಾರ ಎನ್ನುವವರಿಗೆ ಮಾರಾಟ ಮಾಡಿರುತ್ತೇನೆ.

ಹೇಮಂತ ಶ್ರೀನಿವಾಸ ಇನಾಮದಾರ ಇವರ ದೊಡ್ಡಪ್ಪ ವಾದಿಯ ಕಂಪನಿಯ ನಿರ್ದೇಶಕರು ಇದ್ದರು ಎಂಬ ಪ್ರಶ್ನೆಗೆ ಸಾಕ್ಷಿದಾರರು ವಾದಿಯ ತಂದೆಯಾದ ಶ್ರೀನಿವಾಸ ಇನಾಮದಾರ ನಿರ್ದೇಶಕರು ಇದ್ದರು ಎಂದು ಉತ್ತರಿಸುತ್ತಾರೆ. ಈ ರೀತಿ ಖರೀದಿ ಕೊಡುವ ಸಮಯದಲ್ಲಿ ವಾದಿಯ ಕಂಪನಿಗೆ ಬಸವರಾಜ ತೋರಗಲಮಠ ಎನ್ನುವವರು ಕಂಪನಿಯ ಚೇರಮನ ಇದ್ದರು ಎಂದರೆ ನಿಜ. ಸದರಿ ಚೇರಮನ ಮತ್ತು ನಿರ್ದೇಶಕರಾದ ಶ್ರೀನಿವಾಸ ಇನಾಮದಾರ ಇವರ ನಿರ್ದೇಶನದ ಮೇರೆಗೆ ಸದರಿ ಜಮೀನನ್ನು ನಾನು ಹೇಮಂತ ಇವರಿಗೆ ಮಾರಾಟ ಮಾಡಿದ್ದೇನೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ನನ್ನ ಸ್ವಇಚ್ಛೆಯಿಂದ ಮಾರಾಟ ಮಾಡಿದ್ದು ಇರುತ್ತದೆ ಎಂದು ಉತ್ತರಿಸುತ್ತಾರೆ. ನಾನು ಹೇಮಂತ ಇವರಿಗೆ ಯಾವ ದಿನಾಂಕ, ಮಾಹೆ ಮತ್ತು ಇಸ್ವಿಯಲ್ಲಿ ಖರೀದಿ ಕೊಟ್ಟಿರುತ್ತೇನೆ ಎಂದು ನನಗೆ ನೆನಪು ಬರುತ್ತಿಲ್ಲ.

ಹೇಮಂತ ಇವರು ಖರೀದಿ ಪ್ರತಿಫಲವನ್ನು ನನ್ನ ಖಾತೆಗೆ ವರ್ಗಾಯಿಸಿರುವ ಕುರಿತು ಪುರಾವೆ ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿದಾರರು ಸದರಿ ಪ್ರತಿಫಲವನ್ನು ನಗದು ರೂಪದಲ್ಲಿ ಕೊಟ್ಟಿರುತ್ತಾರೆ ಎಂದು ಉತ್ತರಿಸುತ್ತಾರೆ. ವಾದಿ ಕಂಪನಿಯ ನಿರ್ದೇಶನದ ಮೇರೆಗೆ ನಾನು ಮಾರಾಟ ಮಾಡಿರುವ ಕಾರಣ ಸದರಿ ಖರೀದಿ ದಿನಾಂಕ ನನಗೆ ನಿಖರವಾಗಿ ಹೇಳಲು ಬರುತ್ತಿಲ್ಲ ಎಂದರೆ ಸರಿಯಲ್ಲ.

4 ಎಕರೆ 10 ಗುಂಟೆ ಜಮೀನು ಹೇಮಂತ ಇವರಿಗೆ ಖರೀದಿ ಕೊಟ್ಟ ನಂತರ ಸದರಿ ದಾವಾ ಜಮೀನಿನಲ್ಲಿ 4 ಎಕರೆ 15 ಗುಂಟೆ ಜಮೀನು ಉಳಿದಿದೆ ಎಂದು ತೋರಿಸಲು ದಾಖಲಾತಿ ಇರುತ್ತದೆ. ಸಾಕ್ಷಿದಾರರಿಗೆ ತಾವು ಹಾಜರುಪಡಿಸಿರುವ ದಾಖಲಾತಿ ತೋರಿಸಲಾಗಿ ಅದನ್ನು ನೋಡಿ ನಿ.ಡಿ.2 ರಂತೆ ಇರುವ ದಾಖಲಾತಿ ಇರುತ್ತದೆ ಎಂದು ಉತ್ತರಿಸುತ್ತಾರೆ. ಈ ರೀತಿ 8 ಎಕರೆ 25 ಗುಂಟೆ ಮುಂದುವರೆದು 4 ಎಕರೆ 15 ಗುಂಟೆ ಉಳಿದಿರುವ ಕುರಿತು ಮತ್ತು ನಿ.ಡಿ.2 ಕ್ಕೆ ಯಾವುದೇ ಸಂಬಂಧವಿಲ್ಲ ಎಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ. ನಾನು 8 ಎಕರೆ 25 ಗುಂಟೆ ಖರೀದಿ ಮಾಡಿರುವಾಗ ಇರುವ ಕಬ್ಜೆ ವಹಿವಾಟು 4 ಎಕರೆ 15 ಗುಂಟೆ ಪ್ರತಿವಾದಿ ನಂ.1 ಇವರಿಗೆ ಖರೀದಿ ಕೊಡುವಾಗ ಮುಂದುವರೆದಿದ್ದು ಇತ್ತು ಎಂದರೆ ನಿಜ. ಇವತ್ತಿಗೂ ಸಹ ಸದರಿ ಕಬ್ಜಾ ವಹಿವಾಟು ಅದೇ ಸ್ಥಿತಿಯಲ್ಲಿದೆ ಎಂದರೆ ನಿಜ.

***ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ವಾದಿ ಪರ ವಕೀಲರ ಮನವಿಯ ಮೇರೆಗೆ ಮುಂದೂಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.